# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113+116
ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 05.03.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಕ್ರಮ ಸಕ್ರಮದಡಿ ಭೂ ಮಂಜೂರಾತಿ ಕೋರಿ ನಮೂನೆ 50, 53 ಮತ್ತು 57 ರಡಿ ಕೃಷಿಕರು ಅರ್ಜಿ ಸಲ್ಲಿಸಿದ್ದು, ಹಲವು ಕಡೆ ಒಂದೇ ಸರ್ವೆ ನಂಬರ್ ನಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಯ ಭೂಮಿಯು ಇದ್ದು ಭೂ ಮಂಜೂರಾತಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನದಲ್ಲಿದೆಯೇ; ಸದರಿ ಜಮೀನುಗಳ ಗಡಿ ಗುರುತಿಸಲು ಸರ್ಕಾರ ಏನು ಕ್ರಮ ವಹಿಸಿದೆ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಎಲ್ಲಾ Reserved/Notified ಅರಣ್ಯಗಳ ಬಗ್ಗೆ RTC ಇಂಡೀಕರಣ ಮಾಡಲಾಗಿದೆ ಹಾಗೂ ಹೆಚ್ಚಿನ ಎಲ್ಲಾ ಇಂತಹ ಅರಣ್ಯ ಇಲಾಖೆಯಿಂದ ಗುರುತಿಸಿಕೊಂಡಿರುವುದಾಗಿದೆ. ಇಂತಹ ಪ್ರಕರಣಗಳಲ್ಲಿ ಮಂಜೂರಾತಿ ಕೋರಿರುವ ಅರ್ಜಿಗಳ ಬಾಬ್ತು ಅರಣ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ಜಂಟಿಯಾಗಿ ಸ್ಥಳಪರಿಶೀಲನೆ ಮಾಡಿ ಗಡಿಗುರುತಿಸಿ ಮಂಜೂರಾತಿ ಬಗ್ಗೆ ಮಂಡಿಸಲಾಗುತ್ತಿದೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾತಿ ಕೋರಿ ಸಲ್ಲಿಕೆಯಾದ ಅರ್ಜಿಗಳ ಪೈಕಿ 205 ಅರ್ಜಿಗಳ ಅಳತೆ ಕಾರ್ಯನಿರ್ವಹಿಸಲಾಗಿದೆ.<br><br>ಉಡುಪಿ ಜಿಲ್ಲೆಯಲ್ಲಿ 27,282 ಎಕರೆ Deemed Forest ಜಮೀನು ಇರುತ್ತದೆ. ಈ ಪೈಕಿ ಭಾಗಶಃ ಅರಣ್ಯ ಹಾಗೂ ಭಾಗಶಃ ಕಂದಾಯ ಇರುವ ಜಮೀನುಗಳಲ್ಲಿ ಭೂ ಮಂಜೂರಾತಿಗೆ ಕ್ರಮವಹಿಸಿದ್ದು, ಉಡುಪಿ ಜಿಲ್ಲೆಯಲ್ಲಿ ಮಂಜೂರಾತಿ ಕೋರಿ ಸಲ್ಲಿಕೆಯಾದ ನಮೂನೆ 50, 53, 57ರ ಅರ್ಜಿಗಳಲ್ಲಿ ಈಗಾಗಲೇ ಒಂದು ಹಂತದ ಪರಿಶೀಲನೆ ಮುಕ್ತಾಯಗೊಂಡಿದ್ದು, ಸ್ವೀಕೃತವಾದ ಅರ್ಜಿಗಳ ಪೈಕಿ 1048 ಅರ್ಜಿಗಳು ಮಾತ್ರ ಮಂಜೂರಾತಿಗೆ ಅರ್ಹವಿರುತ್ತವೆ. ಮಂಜೂರಾತಿಗೆ ಅರ್ಹವಿರುವ ಅರ್ಜಿಗಳ ಪೈಕಿ ಈಗಾಗಲೇ 337 ಅರ್ಜಿಗಳಿಗೆ ಸಂಬಂಧಿಸಿದಂತೆ ಅಳತೆ ಕಾರ್ಯನಿರ್ವಹಿಸಲಾಗಿದೆ. |
| (ಆ) | ಇದರಿಂದ ಜಮೀನಿನ ಪೋಡಿ ಮಾಡಲು ತುಂಬಾ ವಿಳಂಭವಾಗುತ್ತಿರುವುದು ಸರಿಯಷ್ಟೇ ಈ ಸಮಸ್ಯೆಯನ್ನು ಯಾವಾಗ ಪರಿಹರಿಸಲಾಗುವುದು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮಂಜೂರಿಯಾಗಿರುವ ಜಮೀನುಗಳ ಪೋಡಿ ಕ್ರಮ ಜರುಗಿಸುವಾಗ ಕಂದಾಯ ಹಾಗೂ ಅರಣ್ಯ ಜಮೀನಿಗಳ ಗಡಿಗಳನ್ನು ಪ್ರತ್ಯೇಕವಾಗಿ ವಿಭಜಿಸುವ ಪ್ರಕ್ರಿಯೆ ನಿರ್ವಹಿಸದೇ ನೇರವಾಗಿ ಪೋಡಿ ಕ್ರಮ ಜರುಗಿಸಲಾಗುತ್ತಿದೆ. ಈಗಾಗಲೇ ಸರ್ಕಾರದಿಂದ ಬಗರುಹುಕುಂ ತಂತ್ರಾಂಶ ಮಾಡಿದ್ದು, ಸದರಿ ತಂತ್ರಾಂಶದಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಗೆ ಪ್ರತ್ಯೇಕ ಲಾಗಿನ್ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಉಡುಪಿ ಜಿಲ್ಲೆಯಲ್ಲಿ ಈಗಾಗಲೇ ಮಂಜೂರಿಯಾಗಿರುವ ಜಮೀನುಗಳ ಪೋಡಿ ಕ್ರಮ ಜರುಗಿಸುವಾಗ Deemed Forest ಬಾಬ್ತು ಕಂದಾಯ ಹಾಗೂ ಅರಣ್ಯ ಜಮೀನುಗಳ ಗಡಿಗಳನ್ನು ಪ್ರತ್ಯೇಕವಾಗಿ ವಿಭಜಿಸುವ ಪ್ರಕ್ರಿಯೆ ನಿರ್ವಹಿಸದೆ ನೇರವಾಗಿ ಜಿಲ್ಲೆಯಲ್ಲಿ ಪೋಡಿ ಕ್ರಮ ಜರುಗಿಸಲಾಗುತ್ತಿದೆ. |
| (ಇ) | ಸದರಿ ಸಮಸ್ಯೆಯನ್ನು ಪರಿಹರಿಸಲು ಅರಣ್ಯ ಇಲಾಖೆಯೊಂದಿಗೆ ಜಂಟಿ ಸರ್ವೆ ಮಾಡಲಾಗುವುದೇ: ಯಾವ ಕಾಲಮಿತಿಯಲ್ಲಿ ಜಂಟಿ ಸರ್ವೆ ಮಾಡಲಾಗುವುದು? | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗಶಃ ಅರಣ್ಯ ಇರುವ ಸರ್ವೇ ನಂಬರುಗಳ ಬಾಬ್ತು ಪ್ರತಿ ತಾಲ್ಲೂಕಿನಲ್ಲಿ ಪ್ರತಿ ವಾರ ಜಂಟಿ ಅಳತೆ ನಿರ್ವಹಿಸುತ್ತಿದ್ದು, ಮುಂದಿನ 6 ತಿಂಗಳ ಅವಧಿಯಲ್ಲಿ ಗಡಿ ಗುರುತಿಸಿ ಅಂತಿಮಗೊಳಿಸಲಾಗುವುದು.<br><br>ಉಡುಪಿ ಜಿಲ್ಲೆಯಲ್ಲಿ ಕಂದಾಯ-ಅರಣ್ಯ ಜಮೀನಿನ ಸರ್ವೆ ಕಾರ್ಯಗಳನ್ನು ಜಂಟಿಯಾಗಿ ನಡೆಸುವ ಸಲುವಾಗಿ ಪ್ರತಿ ಮಂಗಳವಾರದಂದು ಆಯಾ ತಾಲೂಕು ತಹಶೀಲ್ದಾರರು ಕಂದಾಯ ಇಲಾಖೆ/ಮೋಜಣಿ ಇಲಾಖೆ/ಅರಣ್ಯ ಇಲಾಖೆಗಳ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸಭೆಯನ್ನು ನಡೆಸಿ Table Top Work ನಡೆಸಿ ಸರ್ವೆ ಕಾರ್ಯಕ್ಕೆ ಬೇಕಾಗುವ ದಾಖಲೆಗಳನ್ನು ಸಂಗ್ರಹಿಸಿ, ಪ್ರತಿ ಗುರುವಾರದಂದು ಜಂಟಿಯಾಗಿ ಕಂದಾಯ/ಅರಣ್ಯ/ಮೋಜಣಿ ಇಲಾಖೆಯವರು ಸ್ಥಳಕ್ಕೆ ಭೇಟಿ ನೀಡಿ ಸರ್ವೆ ಕಾರ್ಯನಡೆಸಿ ನಕ್ಷೆಯನ್ನು ತಯಾರಿಸುವ ಕಾರ್ಯವನ್ನು ನಡೆಸುವಂತೆ ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿದೆ. |

(ಕಡತ ಸಂಖ್ಯೆ: ಆರ್‌ಡಿ 18 ಎಲ್‌ಜಿಎ 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು